S C.R.P.67

Form No.4
(Criminal)
Deposition
Sheets
(R.P.No.57)

# 5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ

## ಸ್ಪೆಷಲ್ ಕೇಸ್ ನಂಬರ್‌ಃ 66/2025

**ಚಾ.ಸಾ.–14 ಪ್ರಾ.ಸಾ.–7**

| | |
|---|---|
| **ಸಾಕ್ಷಿದಾರರ ಹೆಸರು** | **ಡಾಃ ಯೋಗೇಂದ್ರ ಪ್ರಸಾದ್** |
| **ತಂದೆಯ/ಗಂಡನ ಹೆಸರು** | **ರಾಮಯ್ಯ** |
| **ವಯಸ್ಸು** | **51 ವರ್ಷಗಳು** |
| **ಉದ್ಯೋಗ** | **ಸಾರ್ವಜನಿಕ ಆಸ್ಪತ್ರೆ ಮದ್ದೂರು** |
| **ವಾಸ** | **ಮದ್ದೂರು** |

**ದಿನಾಂಕಃ 11–08–2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

1) ನಾನು 09–08–2021 ರಿಂದ ಇವರೆಗೆ ಮಕ್ಕಳ ತಜ್ಞರಾಗಿ ಮದ್ದೂರು ಸರ್ಕಾರಿ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ದಿನಾಂಕ 13–12–2024 ರಂದು ಚಾಸಾ 3 ರವರು ರಾತ್ರಿ 10 ಗಂಟೆ ಸಮಯದಲ್ಲಿ ಹಲ್ಲೆ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ಬಂದಿರುತ್ತಾರೆ. ಅವರ ತಂದೆ ರಾಜು ರವರು ಜೊತೆ ಬಂದಿದ್ದರು. ಅವರಿಗೆ ಶೇಷಾದ್ರಿ ತಂದೆ ದಾಸಪ್ಪ ಎಂಬುವವರು ಚಾಮನಹಳ್ಳಿಯ ಶನಿಮಹಾತ್ಮ ದೇವಸ್ಥಾನದ ಬಳಿ ಹಲ್ಲೆ ಮಾಡಿರುವರೆಂದು ಹೇಳಿರುತ್ತಾರೆ. ಅವರನ್ನು ಪರಿಕ್ಷಿಸಿದಾಗ

1. ಬಲ ಹುಬ್ಬಿನ ಮೇಲೆ 2*1 ಸೆಂ ಮೀಟರ ಗಾತ್ರದ ಕಂಟ್ಯೂಷನ್ ಗಾಯ ಕಂಡು ಬಂದಿರುತ್ತದೆ.

2. ಬಲಗೈನ ಮೊಣಗೈ ಮೇಲೆ ನೋವು ಕಂಡು ಬಂದಿರುತ್ತದೆ. ನಾನು ಅವರಿಗೆ ಪ್ರಥಮ ಚಿಕಿತ್ಸೆ ಕೊಟ್ಟು ನೋವು ಹೆಚ್ಚಿದ್ದರೆ ಮೂಳೆ ತಜ್ಞರ ಬಳಿ ಹೋಗಲು ಹೇಳಿರುತ್ತೇನೆ . ಅವರು ಅಲ್ಲಿಗೆ ಹೋಗಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ.

ಸದರಿಯವರಿಗೆ ನಾನು ಚಿಕಿತ್ಸೆ ಕೊಟ್ಟಿರುವ ಬಗ್ಗೆ ಗಾಯದ ಪ್ರಮಾಣ ಪತ್ರ ಕೊಟ್ಟಿರುತ್ತೇನೆ. ಅದನ್ನು ಈಗ ನೋಡುತ್ತಿದ್ದು , ಅದನ್ನು ಈಗ ನಿಪಿ 10 ಎಂದು , ಸಾಕ್ಷಿಯ ಸಹಿಯನ್ನು ನಿಪಿ 10–ಎ ಎಂದು ಗುರುತಿಸಲಾಯಿತು. ಎಂ ಎಲ್ ಸಿ ಎಕ್ಸಾಟ್ರ್ಯಾಕ್ಟನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ . ಅದನ್ನು ಈಗ ನೋಡುತ್ತಿದ್ದು , ಅದನ್ನು ಈಗ ನಿಪಿ 11 ಎಂದು, ಸಾಕ್ಷಿಯ ಸಹಿಯನ್ನು ನಿಪಿ 11–ಎ ಎಂದು ಗುರುತಿಸಲಾಯಿತು. ನಾನು ಹೇಳಿರುವ ಗಾಯಗಳು ದೊಣ್ಣೆಯಿಂದ ಹಲ್ಲೆ ಮಾಡಿದರೆ ಆಗುವ ಸಾಧ್ಯತೆ ಇರುತ್ತದೆ. ತನಿಖಾಧಿಕಾರಿಗಳು ಮು ಮಾ 4 ನ್ನು ಹಾಜರು ಮಾಡಿ ಅಭಿಪ್ರಾಯ ಕೋಡಲು ಕೋರಿದ್ದರು . ನಾನು ಅಭಿಪ್ರಾಯ ಕೊಟ್ಟಿರುತ್ತೇನೆ. ಅದನ್ನು ದಿನಾಂಕ 13–05–2025 ರಂದು ಕೊಟ್ಟಿರುತ್ತೇನೆ. ಸದರಿ ಕೋರಿಕೆಯನ್ನು ಈಗ ನಾನು ನೋಡುತ್ತಿದ್ದೇನೆ. ಅದನ್ನು ಈಗ ನಿಪಿ 12 ಎಂದು, ಸಾಕ್ಷಿಯ ಸಹಿಯನ್ನು ನಿಪಿ 12–ಎ ಎಂದು ಗುರುತಿಸಲಾಯಿತು. ಎಂ ಒ 4 ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ . ನಾನು ನೀಡಿದ ವರದಿಯನ್ನು ಈಗ ನೋಡುತ್ತಿದ್ದೇನೆ . ಅದನ್ನು ಈಗ ನಿಪಿ 13 ಎಂದು, ಸಾಕ್ಷಿಯ ಸಹಿಯನ್ನು ನಿಪಿ 13–ಎ ಎಂದು ಗುರುತಿಸಲಾಯಿತು.

**ಪಾಟೀಸವಾಲುಃ**

(ಆರೋಪಿ ಮತ್ತು ಅವರ ವಕೀಲರು ಸಮಯ ಕೋರಿದ್ದಾರೆ. ಸ–ಕಾರಣ ಇಲ್ಲದ ಕಾರಣ ಪಾಟೀಸವಾಲು ಇಲ್ಲ ಎಂದು ಪರಿಗಣಿಸಲಾಯಿತು).

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)
ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಎಂ.ಸಿ ನಂಜೇಗೌಡ)**
5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ
ನ್ಯಾಯಾಲಯ, ಮಂಡ್ಯ